(ಈ) ಕೊಪ್ಪಳ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆ.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ):- ಮಾನ್ಯ ಅಧ್ಯಕ್ಷರೆ, ಕೊಪ್ಪಳ ಕ್ಷೇತ್ರದಲ್ಲಿ ಬರುವ ಏತ ನೀರಾವರಿ ಯೋಜನೆಗಳ ಅಂಗವಾಗಿ 25-7-1996ರಿಂದ 12-12-1996ರ ಅವಧಿಗೆ ಮಾತ್ರ ರೈತರಿಗೆ ಜಮೀನಿಗೆ ಸದರಿ ಯೋಜನೆಯಿಂದ ನೀರಾವರಿಯ ಒಂದು ಅನುಕೂಲತೆ ಸಿಗುತ್ತಿದೆ. ಆದರೆ ನೀಲಾವರಿ ಟ್ಯಾಕ್ಸ್ ಅನ್ನು ಮಾತ್ರ ಎರಡು ಬೆಳೆಗಳಿಗೆ ಇದುವರೆವಿಗೆ ವಸೂಲ್ಮಾಡುತ್ತಿದ್ದೀರಿ. ಹೀಗಾಗಿ ರೈತರಿಗೆ ತುಂಬಾ ತೊಂದರೆಯಾಗಿದೆ. ಕಾರಣ, ಒಂದು ಬೆಳೆಗೆ ಮಾತ್ರ ಟ್ಯಾಕ್ಸ್ ಅನ್ನು ಹಾಕಬೇಕೆಂದು ನೀರಾವರಿ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ, 1996-97ನೇ ಸಾಲಿನ ಆಯವ್ಯಯದ ಅಪೆಂಡಿಕ್ಸ್ 'ಇ' ಭಾಗ 2ರ ಹೊಸ ಕಾಮಗಾರಿಗಳ ಪಟ್ಟಿಯಲ್ಲಿ ಮೇಲ್ಕಂಡ ಏತನೀರಾವರಿ ಯೋಜನೆಗಳು ಸೇರಿದ್ದು, ಇವು ಹೊಸ ಕಾಮಗಾರಿಗಳಾಗಿದ್ದು, ಇವುಗಳು ಮಂಜೂರಾಗಿಲ್ಲ. ಇವುಗಳ ಸರ್ವೇಕ್ಷಣೆ, ವಿನ್ಯಾಸ ಮತ್ತು ಅಂದಾಜುಗಳ ತಯಾರಿಕೆಗೆ ಮಾತ್ರ ಪ್ರತಿ ಕಾಮಗಾರಿಗೆ 1996-97ನೇ ಸಾಲಿನಲ್ಲಿ 1000.00 ರೂ.ಗಳ ಅನುದಾನ ಒದಗಿಸಲಾಗಿದೆ. ಕಾಮಗಾರಿಗಳ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯನ್ನು ಪರಿಶೀಲಿಸಿ, ಕಾರ್ಯ ಸಾಧುವಾದಲ್ಲಿ ಇವುಗಳಿಗೆ ಮುಂದಿನ ಸಾಲಿನಲ್ಲಿ ಸಾಕಷ್ಟು ಅನುದಾನ ಒದಗಿಸಿ, ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

7. ಜಂಟಿ ಸದನ ಸಮಿತಿಯ ಕಾಲಾವಧಿ ವಿಸ್ತರಣೆ.

ವಿಷಯ: ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ಸಂಸದೀಯ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರು):- ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಮಗ್ರವಾದ ತನಿಖೆ ನೆಡೆಸಿ ಈ ಸದನಕ್ಕೆ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಸದನದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 1996 ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ತಮ್ಮನ್ನು ಕೋರುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದು ಬಹಳ ದಿವಸವಾಯಿತು. ಏಕೆಂದರೆ ಇದರ ಪ್ರಾಮುಖ್ಯತೆಯೇ ಹೋಗುತ್ತಿದೆ. ತಮಗೂ ಕೂಡ ಇದು ಗೊತ್ತಿದೆ, ಕಳೆದ ಸಾರಿ ಇದನ್ನು ಸದನದಲ್ಲಿ ಎತ್ತಿದ ಕಾರಣವೇನೆಂದರೆ, ಕೂಡಲೇ ಈ ಸಮಸ್ಯೆ ಪರಿಹಾರವಾಗಬೇಕು, ಅದಕ್ಕಾಗಿ ಈ ಸದನ ಒಂದು ಸಮಿತಿಯನ್ನು ಮಾಡಿ, ಬೇಗನೆ ವರದಿಯನ್ನು ಕೊಡಬೇಕೆನ್ನುವ ದಿಸೆಯಿಂದ ರಚಿಸಲಾಯಿತು. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈ ಸಮಿತಿಯನ್ನು ರಚಿಸಿ ಏಳೆಂಟು ತಿಂಗಳಾಯಿತು. ಇಷ್ಟೊಂದು ದೀರ್ಘವಾಗಿ ನಡೆದಂಥ ಈ ಸದನದ ಸಮಿತಿ ಯಾವುದೂ ಇಲ್ಲ. ಆದ್ದರಿಂದ ಇದಕ್ಕೆ

ಏನು ಕಡಿವಾಣ ಹಾಕುತ್ತೀರೆನ್ನುವುದು ತಮಗೆ ಬಿಟ್ಟಿದ್ದುದು. ಆದರೆ ಆ ಸದನದ ಸಮಿತಿಯನ್ನು ಯಾವ ಉದ್ದೇಶದಿಂದ ಮಾಡಲಾಗಿತ್ತೋ ಆ ಉದ್ದೇಶ ಸಫಲವಾಗುವುದಿಲ್ಲ ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ಅಧ್ಯಕ್ಷರು:- ಮಾನ್ಯ ಖಿರ್ಗೆಯವರು ಹೇಳಿದಂಥ ಮಾತನ್ನು ನಾನು ಸಂಪೂರ್ಣವಾಗಿ ಅನುಮೋದನೆ ಮಾಡುತ್ತೇನೆ. ಏಕೆಂದರೆ, ಕಡತದಲ್ಲಿ ಯಾವಾಗಲಾದರೂ ಅವಲೋಕನ ಮಾಡಿದರೆ ಗೊತ್ತಾಗುತ್ತದೆ. ಈ ವಿಚಾರದಲ್ಲಿ ನೀವು ಹೇಳತಕ್ಕಂಥ ಅಭಿಪ್ರಾಯಗಳನ್ನು ಇನ್ನೂ ಕಠಿಣವಾದ ಮಾತುಗಳಲ್ಲಿ ಈಗಾಗಲೇ ನಾನು ಅವರಿಗೆ ವ್ಯಕ್ತ ಮಾಡಿದ್ದೇನೆ. ಸಮಿತಿ ಕೆಲಸ ಮಾಡತಕ್ಕಂಥ ಒಂದು ಹಂತದಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ಸ್ ಅನ್ನು ಅವರಿಗೆ ಹೇಳಿದ್ದನ್ನು ಬಿಟ್ಟು, ಉಳಿದೆಲ್ಲಾ ಜವಾಬ್ದಾರಿಯನ್ನು ಅವರೇ ತೆಗೆದುಕೊಳ್ಳುವುದಕ್ಕೆ ಹೊರಟುಬಿಟ್ಟಿದ್ದರು. ಯಾವ ಟರ್ಮ್ಸ್ ಅನ್ನು ಅವರಿಗೆ ನಾವು ರೆಫರ್ ಮಾಡಿದ್ದೇವೋ ಅದನ್ನು ಅವರು ನೋಡಿ ಮುಗಿಸಿದ್ದರೆ ಇಷ್ಟು ದಿವಸ ಅವರಿಗೆ ಬೇಕಾಗುತ್ತಿರಲಿಲ್ಲ. ಈ ಮಧ್ಯೆ ಆ ಸಮಿತಿಯ ಅಧ್ಯಕ್ಷರಾಗಿದ್ದವರು ಈಗ ಮಂತ್ರಿಗಳಾಗಿದ್ದಾರೆ, ಹೊಸ ಅಧ್ಯಕ್ಷರು ಬಂದು, ಕೆಲವು ಸದಸ್ಯರು ಮಂತ್ರಿಗಳಾದರು, ಕೋರಮ್ ಸಿಗುತ್ತಿರಲಿಲ್ಲವೆಂದು ಇತ್ತೀಚೆಗೆ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡವರು ಕೇಳಿದ್ದರಿಂದ ಆಗಬಹುದು ಎಂದು ಹೇಳಿದ್ದೇನೆ. ಮೊದಲನೆ ಹಂತದಲ್ಲಿ, ನಿಜವಾಗಿಯೂ ಕೂಡ ನನಗೆ ಬೇಸರವಾಗುತ್ತದೆ. ಎಲ್ಲಾ ಪಕ್ಷದ ಸದಸ್ಯರನ್ನು, ಬಹಳ ಪ್ರಮುಖರನ್ನೆಲ್ಲಾ, ಜವಾಬ್ದಾರಿ ಇರತಕ್ಕಂಥವರನ್ನೆಲ್ಲಾ ಹಾಕಿದ್ದೆವು, ವರದಿಯನ್ನು ಬಹಳ ಬೇಗ ಕೊಡುತ್ತಾರೆಂದು ಅಪೇಕ್ಷೆ ಪಟ್ಟಿದ್ದೆವು, ಆದರೆ ಅದು ಹಾಗೆ ಆಗಲಿಲ್ಲ. ನಿಮ್ಮ ಭಾವನೆಗಳಿಗೆ ನಾನು ಧ್ವನಿಗೂಡಿಸಿ, ಇದು ಕಡೆಯದು, ಇನ್ನು ಮತ್ತೆ ಅವಕಾಶವನ್ನು ಕೊಡುವುದಿಲ್ಲ. ಆದಷ್ಟು ಬೇಗ ನಮಗೆ ವರದಿಯನ್ನು ಸಲ್ಲಿಸುವಂತೆ ನಾನು ಹೇಳುತ್ತೇನೆ. ಯಾರು ಸಮಿತಿಗಳಲ್ಲಿ ಸದಸ್ಯರಾಗಿ ನಿಯುಕ್ತರಾಗಿದ್ದಾರೋ ಅವರೂ ಕೂಡ ಈ ಜವಾಬ್ದಾರಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ನಾನು ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾವ ಏನೆಂದರೆ,

''ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಮಗ್ರವಾದ ತನಿಖೆ ನಡೆಸಿ ಈ ಸದನಕ್ಕೆ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಸದನದ ಸಮಿತಿಗೆ ತನ್ನ ವರದಿಯನ್ನು ಸಲ್ಲಿಸಲು 1996 ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸುವುದು''

(ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)